ಮಲ್ಲಿಕಾಗೆ ಕಸಿವಿಸಿಯಾಯಿತು. ಎಷ್ಟೋ ಸಲ ಜಗಳಗಳಿಗೆ ಕಾರಣಗಳು ಸಿಲ್ಲಿಯಾಗಿರುತ್ತವೆ; ಆದರೆ ಅವುಗಳ ಪರಿಣಾಮ ಭೀಕರವಾಗಿರುತ್ತದೆ ಎಂದು ರಂಜಿತಾಗೆ ಒಮ್ಮೆ ಹೇಳಬೇಕೆಂದುಕೊಂಡಿದ್ದಳು... ಇನ್ನು ಮುಂದೆ ಎಂದೂ ರಂಜಿತಾಗೆ ಇದನ್ನು ಹೇಳುವುದು ಸಾಧ್ಯವೇ ಇಲ್ಲವೇನೋ, ಬೇಸತ್ತ ಅವಳು ಕೋಲ್ಕತ್ತಕ್ಕೆ ವಾಪಸ್ ಹೋಗಿಬಿಡುತ್ತಾಳೋ ಏನೋ, ಅವಳು ಇನ್ನೆಂದೂ ತನಗೆ ಸಿಗುವುದೇ ಇಲ್ಲವೇನೋ ಅನ್ನಿಸಿ ಮಲ್ಲಿಕಾಗೆ ಅಳು ಬಂತು. ಆ ಅವಘಡದ ಕಾಲದಲ್ಲಿ ರಂಜಿತಾಳ ಫೋನ್ ಕೂಡ ಸಿಗುತ್ತಿರಲಿಲ್ಲ.

ಇದೆಲ್ಲ ಆದ ಒಂದೆರಡು ತಿಂಗಳ ನಂತರ ಮಲ್ಲಿಕಾಳ ಹಳೆಯ ನಂಬರಿಗೆ ರಂಜಿತಾಳ ಮೆಸೇಜು ಬಂದಾಗ ಕಳೆದು ಹೋದ ನಿಧಿಯೊಂದು ಸಿಕ್ಕಂತಾಯಿತು. ಅವತ್ತಿನ ಕುತ್ತಿನಿಂದ ಪಾರಾಗಿ ಚೇತರಿಸಿಕೊಂಡ ಮೇಲೆ ಯಾರನ್ನೂ ಭೇಟಿಯಾಗದೆ ಗುಟ್ಟಾದ ಸ್ಥಳದಲ್ಲಿದ್ದ ರಂಜಿತಾ, ನಂತರ ಕೊರೊನಾ ಲಾಕ್‌ಡೌನ್ ಆದ ಮೇಲೆ, ಯಾರಿಗೂ ಗೊತ್ತಾಗದಂತೆ ಬೆಂಗಳೂರಿನ ಹೊರವಲಯದಲ್ಲಿದ್ದ ಡಾ. ರಾಮಾನಾಯಕರ ನರ್ಸಿಂಗ್ ಹೋಮ್ ಸೇರಿ ವಿಶ್ರಾಂತಿ ಪಡೆಯುತ್ತಿದ್ದಳು; ರಂಜಿತಾ ಮೆಸೇಜು ನೋಡಿದ ತಕ್ಷಣ ಮಲ್ಲಿಕಾ ತನ್ನ ಹೊಸ ಫೋನ್ ನಂಬರ್ ಕಳಿಸಿದ್ದಳು. ಮರುಗಳಿಗೆಗೇ ರಂಜಿತಾಳಿಂದ ಫೋನ್ ಬಂತು. ಎರಡನೇ ವಾಕ್ಯ ಮುಗಿಯುವ ಮೊದಲೇ ಅಳತೊಡಗಿದ ರಂಜಿತಾ, 'ಮಲ್ಲಿಕಾ! ನಿನ್ನ ಫೋನ್ ಏನಾಗಿದೆ? ಐ ರಿಯಲೀ ಮಿಸ್ ಯೂ! ಪ್ಲೀಸ್ ಬಾರೇ' ಎಂದು ಕೇಳಿಕೊಂಡಿದ್ದಳು. ಇದಾದ ಮೇಲೆ ಮಲ್ಲಿಕಾ ಸಂಜೆ ಒಂದೆರಡು ಗಂಟೆ ರಂಜಿತಾ ಜೊತೆ ನರ್ಸಿಂಗ್‌ಹೋಮ್‌ನಲ್ಲಿ ಕಳೆಯುತ್ತಿದ್ದಳು. ಹಿಂದೊಮ್ಮೆ ಒಂದೆರಡು ವಾರ ಜ್ವರದಿಂದ ಬಳಲಿದ್ದಾಗ ತಮ್ಮ ಪೇಶೆಂಟ್ ಆಗಿದ್ದ ಮಲ್ಲಿಕಾ ಜೊತೆ ಈಗ ಕೊಂಚ ಬಿಡುವಾಗಿ ಮಾತಾಡತೊಡಗಿದ್ದ ಡಾ. ರಾಮಾನಾಯಕ್ ರಂಜಿತಾಳ ಮನಸ್ಸಿಗಿಂತ ಮಲ್ಲಿಕಾಳ ಮನಸ್ಸಿನ ಬಗ್ಗೆ ತಿಳಿದುಕೊಂಡ ವಿವರಗಳು ಹೆಚ್ಚು ವಿಚಿತ್ರವಾಗಿದ್ದವು!

## 3

ಐವತ್ತು ಜನ ಶಾಸಕರು ತಿಂಗಳುಗಟ್ಟಲೆ ತಮ್ಮ ಪಾರ್ಟಿಗೆ ಕೈಕೊಟ್ಟು, ಊರು ಮನೆ ಹೆಂಡತಿ ಮಕ್ಕಳು ಎಲ್ಲ ಬಿಟ್ಟು ಮೊದಲು ಗೋವಾದಲ್ಲಿ, ಆಮೇಲೆ ಮುಂಬೈನಲ್ಲಿ ಒಂದು ಥರದ ಬಂಧನದ ಸ್ಥಿತಿಯಲ್ಲಿದ್ದ ಕಾಲದ ಚಿತ್ರವಿಚಿತ್ರ ಪೊಲಿಟಿಕಲ್ ಸ್ಟೋರಿಗಳನ್ನು ಕವರ್ ಮಾಡಿ ಸುಸ್ತಾಗಿ, ಅಸಹ್ಯವಾಗಿ, ವಾಪಸ್ ಬಂದ ಮೇಲೆ ಚಾನಲ್ ಕೆಲಸವನ್ನೇ ಬಿಟ್ಟ ರಮೇಶ್ ರೆಡ್ಡಿಗೆ, ಮಲ್ಲಿಕಾ ಆ ವಿಷಯ ಕೇಳಿ ಅಷ್ಟೆಲ್ಲ ರಂಪ ಮಾಡುತ್ತಾಳೆಂಬ ಅಂದಾಜಿರಲಿಲ್ಲ. ಎಂಜಿನಿಯರಿಂಗ್ ಓದಿದ್ದ ರಮೇಶ್ ಮೀಡಿಯಾಗೆ ಬರಲು ಮಲ್ಲಿಕಾ ಕೂಡ ಕಾರಣವಾಗಿದ್ದಳು. ಮಲ್ಲಿಕಾ–ರಮೇಶ್ ಇನ್ನೂ ಮದುವೆಯಾಗದಿದ್ದರೂ ಆಗಾಗ್ಗೆ ಒಟ್ಟಿಗೇ ಇರುತ್ತಿದ್ದರು. ಮಲ್ಲಿಕಾ ಪೀಜಿಯಲ್ಲಿದ್ದರೂ, ಕೆಲವೊಮ್ಮೆ ರಮೇಶನ ಫ್ಲಾಟಿನಲ್ಲಿ ಉಳಿಯುತ್ತಿದ್ದಳು. ಆದರೆ, ಮುಂಬಯಿಯಿಂದ ಬಂದ ರಮೇಶ್ ತನಗೂ ಹೇಳದೆ ಕೆಲಸ ಬಿಟ್ಟಿದ್ದಕ್ಕೆ ರೇಗಿ ಮೇಲೆದ್ದ ಮಲ್ಲಿಕಾ ಏಕಾಏಕಿ ಹೊರಟುಹೋಗಿದ್ದಳು. ಆಮೇಲೆ ಅವನಿಗೂ ಹೇಳದೆ ಮುಂದಿನ ಒಂದು ವಾರದಲ್ಲೇ ತಾನಿದ್ದ ಪೀಜಿಯನ್ನೂ ಬದಲಿಸಿದ್ದಳು; ಫೋನ್ ಸ್ವಿಚ್ ಆಫ್ ಮಾಡಿ, ಬೇರೆ ನಂಬರ್ ಬಳಸತೊಡಗಿರಬಹುದು ಎಂಬ ಅನುಮಾನ ರಮೇಶನಿಗೆ ಹುಟ್ಟಿತು. ಇದೆಲ್ಲ ಮಲ್ಲಿಕಾಳ ಹಳೆಯ ಶೈಲಿಗಿಂತ ಪೂರಾ ಭಿನ್ನವಾಗಿತ್ತು; ವಿಚಿತ್ರವಾಗಿತ್ತು. ಮಲ್ಲಿಕಾ ಹೀಗೆ ಥಟ್ಟನೆದ್ದು ರಮೇಶನ ಫ್ಲಾಟ್ ಬಿಟ್ಟು ಹೋಗುವುದೇನೂ ಹೊಸದಾಗಿರಲಿಲ್ಲ; ಆದರೆ ಈಚಿನ ತಿಂಗಳುಗಳಲ್ಲಿ ಚಾನಲ್ಲಿನ ಕೆಲಸಗಳ ಒತ್ತಡಗಳಿಂದಾಗಿಯೋ, ಅಥವಾ ಇನ್ನಿತರ ರಗಳೆಗಳಿಂದಾಗಿಯೋ... ಅವಳ ಈ ಉದ್ವಿಗ್ನತೆ ಬಗೆಬಗೆಯಲ್ಲಿ ಮರುಕಳಿಸುತ್ತಿದ್ದುದನ್ನು ಗಮನಿಸಿದ ರಮೇಶ್ ದುಗುಡಗೊಳ್ಳುತ್ತಿದ್ದ.